ವ್ಯಕ್ತಪಡಿಸುತ್ತಿದ್ದಾರೆ, ಅದನ್ನು ನಾವು ಕೇಳುತ್ತಿದ್ದೇವೆ. ಹಾಗಾಗಿ ಇದಕ್ಕೆ ಹೆಚ್ಚಿನ ಮಹತ್ವವನ್ನು ಕೊಡಬೇಕಾಗಿಲ್ಲ. ಸರ್ಕಾರ ಇವತ್ತು ಕಾನೂನಿನ ಚೌಕಟ್ಟಿನಲ್ಲಿ ಏನು ತೀರ್ಮಾನ ಮಾಡಬೇಕಾಗಿದೆ ಅದಕ್ಕೆ ನಾವು ಬದ್ಧರಾಗಿದ್ದೇವೆ.

ಅಧ್ಯಕ್ಷರು : ಆಯಿತು, ಈಗ ಶೂನ್ಯವೇಳೆ ಮುಕ್ತಾಯವಾಗಿದೆ, ಚರ್ಚೆಗೆ ಅವಕಾಶವಿಲ್ಲ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳನ್ನು ಹೆಲ್ಮೆಟ್ ಕಡ್ಡಾಯದ ಬಗ್ಗೆ ....

(ಅಡಚಣೆ)

ಶ್ರೀ ದಿನೇಶ್ ಗುಂಡೂರಾವ್ : ಶೂನ್ಯವೇಳೆಯಲ್ಲಿ ಮಾತನಾಡಲಿಕ್ಕೆ ನಾವು ಬಹಳ ಹೊತ್ತಿನಿಂದ ತಮ್ಮಲ್ಲಿ ಅವಕಾಶ ಕೇಳುತ್ತಿದ್ದೇವೆ.

ಶ್ರೀ ನೆ.ಲ. ನರೇಂದ್ರಬಾಬು : ಸರ್, ನೀವು ಹಿಂದೆ ಕುಳಿತಿರುವವರಿಗೆ ಅವಕಾಶವೇ ಕೊಡುತ್ತಿಲ್ಲ.

ಅಧ್ಯಕ್ಷರು : ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ.

ಶ್ರೀ ವಿ. ಸೋಮಣ್ಣ : ಯಾವುದಕ್ಕೂ ಅವಕಾಶವನ್ನೇ ಕೊಡದಿದ್ದರೆ ಹೇಗೆ? ಅವರಿಗೂ ಒಂದು ಅವಕಾಶವನ್ನು ಕೊಡಿ.

ಅಧ್ಯಕ್ಷರು : ನಾವು ವಿಧಾನಸಭಾ ನಿಯಮಗಳನುಸಾರ ಸದನವನ್ನು ನಡೆಸಬೇಕು. ಏನೆಂದರೆ ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ. ಮುಂದಿನ ಸಾಲಿನ ನಿಮ್ಮ ನಾಯಕರುಗಳೂ ವಿಷಯ ಪ್ರಸ್ತಾಪ ಮಾಡಿದ್ದಾರೆ, ಸಭಾನಾಯಕರು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರಗಳನ್ನು ಕೊಟ್ಟಿದ್ದಾರೆ, ಹಾಗಾಗಿ ಚರ್ಚೆಗೆ ಅವಕಾಶವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇರೆ ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡತಕ್ಕಂಥಾದ್ದು ಇರುತ್ತದೆ. ಲೋಕಾಯುಕ್ತರ ಬಗ್ಗೆ ಅವರು ಪ್ರಸ್ತಾಪ ಮಾಡಿದರು. ಇನ್ನೊಂದು ವಿಷಯ ಇದ್ದರೆ, ಅವರಿಗೆ ಕೊಡಬೇಕು. ಮುಂದಿನ ಸಾಲಿನಲ್ಲಿ ನಿಮ್ಮ ಮುಖಂಡರು ಮಾತನಾಡಿದ್ದಾರೆಂದು, ನಮ್ಮ ನಮಗೇ ಎತ್ತಿಕಟ್ಟಬೇಡಿ. ಯಾವ ಯಾವ ವಿಷಯಕ್ಕೆ ಯಾರಿಗೆ ಕೇಳಬೇಕೋ, ಅವರನ್ನು ಕೇಳಿ.

ಅಧ್ಯಕ್ಷರು : ದಯವಿಟ್ಟು ಕೇಳಿ, ಕೆಲವರು ನೋಟೀಸ್ ಕೊಟ್ಟಿದ್ದಾರೆ. ಅದನ್ನು ನಾನು ಡಿನೈ ಮಾಡುತ್ತಾ ಇಲ್ಲ. ಪ್ರತಿ ದಿನ 4–5 ಜನರಿಗೆ ಶೂನ್ಯವೇಳೆಯಲ್ಲಿ ಅವಕಾಶ ಮಾಡಿಕೊಡುತ್ತಿದ್ದೇನೆ. ಆದರೆ, ಇದರ ಬಗ್ಗೆ ಚರ್ಚೆ ಇಲ್ಲವೆಂದು ಹೇಳಿದೆ. ನಾನು, ಅವರೂ ಕೂಡ ಇದರ ಬಗ್ಗೆಯೇ ಮಾತನಾಡುವುದಕ್ಕೆ ಕೇಳುತ್ತಿದ್ದಾರೆಂದು ತಿಳಿದುಕೊಂಡೆ. ದಯಮಾಡಿ, ಎಲ್ಲರೂ ಕುಳಿತುಕೊಳ್ಳಿ.

(ಆ) ವಿಷಯ: ರಾಜ್ಯದಲ್ಲಿ ಹೆಲ್ಮೆಟ್ ಕಡ್ಡಾಯಗೊಳಿಸುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸರ್ಕಾರ ಈ ತಿಂಗಳಿಂದ ಹೆಲ್ಮೆಟ್ ಕಡ್ಡಾಯ ಮಾಡುವ ಬಗ್ಗೆ ಒಂದು ಆದೇಶವನ್ನು ಹೊರಡಿಸಿದೆ. ಅದು ಹೋದ ತಿಂಗಳು ಬಂದಿದೆ. ಈ ತಿಂಗಳಿನಿಂದ ಒಂದೇ ವಾಹನದಲ್ಲಿ ಇಬ್ಬರು ಅಂದರೆ ಹಿಂದುಗಡೆ ಕುಳಿತವರು, ಮುಂದುಗಡೆ ಕುಳಿತವರು ಹೆಲ್ಮೆಟ್ ಹಾಕತಕ್ಕಂಥಾದ್ದು ಒಂದು. ಸಣ್ಣ ಸಣ್ಣ

ಎರಡು ಚಕ್ರದ ಗಾಡಿಗಳಲ್ಲಿ ಹೆಲ್ಮೆಟ್ ಹಾಕಿಕೊಳ್ಳಬೇಕೇ ಬಿಡಬೇಕೇ ಎಂಬುದು ಎರಡನೆಯದು. ಮೂರನೆಯದು, ನಾನು ಸರ್ಕಾರಕ್ಕೆ ಏನು ಹೇಳುತ್ತಿದ್ದೇನೆಂದರೆ, ಕಡ್ಡಾಯ ಸರಿಯೇ? ಕಡ್ಡಾಯ ಮಾಡತಕ್ಕಂಥಾದ್ದು ಸರ್ವಾಧಿಕಾರಿ ಮನೋಭಾವನೆ ಆಗುತ್ತದೆ. ನ್ಯಾಯಾಲಯ ಆದೇಶ ಕೊಟ್ಟಿದೆ ಎಂದು ಹೇಳಿದರೆ, ನೀವು ಅದಕ್ಕೆ ಮೇಲ್ಮನವಿ ಸಲ್ಲಿಸಬೇಕು. ತಪ್ಪಿದರೆ, ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಬೇಕು.

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೇ, ಒಂದು ವರದಿ ಇದೆ. ಅದರಲ್ಲಿ ಸಾಯುವವರ ಸಂಖ್ಯೆ, ಹೆಡ್‌ಗೆ ಇಂಜ್ಯುರಿಯಾದರೆ ಜಾಸ್ತಿಯಾಗುತ್ತದೆ. ಆದ್ದರಿಂದ ಸತ್ತುಹೋಗಬೇಕೆಂದು ಹೇಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ಇಲ್ಲ ಸಾರ್. ಇದನ್ನು ಹಾಕಿಕೊಂಡವರೂ ಹೋಗುತ್ತಾರೆ. ಹೆಲ್ಮೆಟ್ ಹಾಕಿಕೊಂಡ ತಕ್ಷಣ ಎಲ್ಲರೂ ಬದುಕುತ್ತಾರೆ ಎಂದಲ್ಲ. ಹೆಲ್ಮೆಟ್ ಹಾಕಿಕೊಂಡರೆ ಕೂದಲು ಉದುರುತ್ತೆ. ಕಿವಿ ಕೇಳುವುದಿಲ್ಲ. ಕಣ್ಣು ದೃಷ್ಟಿ ಹೋಗುತ್ತೆ. ಹಿಂದುಗಡೆ ಬರತಕ್ಕಂಥವರಿಗೆ ತೊಂದರೆ ಇರಬಹುದು. ಕೆಲವರು ಹೆಲ್ಮೆಟ್ ಹಾಕಿಕೊಂಡು ತಲೆ ಉಳಿಸಿಕೊಳ್ಳಬಹುದು, ಬದುಕಬಹುದು, ಆದರೆ, ಹೆಲ್ಮೆಟ್ ಹಾಕಿಕೊಂಡವರೆಲ್ಲರೂ ಬದುಕುತ್ತಾರೆ ಎಂಬುದು ಸರಿಯಲ್ಲ. ಆದರೆ, ನಾನು ಏನು ಹೇಳುತ್ತೇನೆಂದರೆ, ನಮ್ಮ ಜೀವ ನಮ್ಮ ಕೈಯಲ್ಲಿದೆ. ಸರ್ಕಾರ ನೇರವಾಗಿ ಕಡ್ಡಾಯ ಮಾಡುತ್ತೇವೆಂದು ಹೇಳತಕ್ಕಂಥಾದ್ದು ಸರಿಯಲ್ಲ. ಕಡ್ಡಾಯ ಎನ್ನುವ ಪದ್ಧತಿ ಸರ್ವಾಧಿಕಾರಿ ಸರ್ಕಾರಕ್ಕೆ ಹಿಂದುಗಡೆ ಕುಳಿತುಕೊಳ್ಳತಕ್ಕಂಥವರಿಗೆ ಕಡ್ಡಾಯ ಮಾಡತಕ್ಕಂಥಾದ್ದು ಒಳ್ಳೆಯದಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ತಮಗೆ ಈಗಾಗಲೇ ಗೊತ್ತಿದೆ. ಬಹಳ ವರ್ಷಗಳ ಹಿಂದೆಯೇ ಹೆಲ್ಮೆಟ್ ಹಾಕಿಕೊಳ್ಳಬೇಕೆಂದು ಕಡ್ಡಾಯ ಮಾಡಲಾಗಿದೆ. ಅದಕ್ಕೆ Nimhans ಇದೊಂದು ಪ್ರತಿಷ್ಠಿತವಾದಂಥ ಸಂಸ್ಥೆ ಮತ್ತು ಆಸ್ಪತ್ರೆ ಅವರೂ ಕೂಡ ಹೇಳಿದ್ದಾರೆ. ನೂರಕ್ಕೆ 60–70 ರಷ್ಟು ಅಪಘಾತಗಳಾದಂಥ ಸಂದರ್ಭದಲ್ಲಿ, ತಲೆಗೆ ಪೆಟ್ಟು ಬಿದ್ದಂಥ ಸಂದರ್ಭದಲ್ಲಿ ಸಾವು ಸಂಭವವಾಗುತ್ತದೆ. ಉಳಿದ ಗಾಯಗಳಿಗೇನಾದರೂ ಕೂಡ ಶುಶ್ರೂಷೆ ಮಾಡಬಹುದು. ಅವುಗಳ ಆರೋಗ್ಯ ಸುಧಾರಿಸುವಂಥ ರೀತಿಯಲ್ಲಿ ವ್ಯವಸ್ಥೆ ಮಾಡಬಹುದು. ಆದರೆ, ತಲೆಗೆ ಪೆಟ್ಟು ಬಿದ್ದಾಗ ರಕ್ತಸ್ರಾವವಾಗುತ್ತದೆ, ಅದರ ಮೂಲಕವಾಗಿ ಸಾವು ಸಂಭವಿಸುತ್ತದೆ. ಆ ಕಾರಣಕ್ಕಾಗಿ ಹೆಲ್ಮೆಟ್‌ನ್ನು ಧರಿಸಿಕೊಳ್ಳಬೇಕು ಎಂದು ಶಿಫಾರಸ್ಸು ಮಾಡಿದ್ದರು. ಇದರ ಬಗ್ಗೆ ಶಾಸಕರು ಮತ್ತು ಸಾರ್ವಜನಿಕರಲ್ಲಿ ಬೇರೆ ಬೇರೆ ವಾದ ವಿವಾದಗಳು ನಡೆದ ಮೇಲೆ, ಈಗಾಗಲೇ ಸರ್ಕಾರ ಈ ನಿರ್ಧಾರವನ್ನು ತೆಗೆದುಕೊಂಡಿದೆ. ಇದು ಸರ್ವಾಧಿಕಾರ ಪ್ರವೃತ್ತಿ ಅಲ್ಲ. ಯಾವುದನ್ನು ಕಡ್ಡಾಯ ಮಾಡುತ್ತೇವೆಂದು ಹೇಳಿದಾಗ, ಅವರು ಹೇಳಿದರು. ಪಾನ ಪ್ರತಿಬಂಧವನ್ನು ಮಾಡಬೇಕೆಂದು ಈಗತಾನೇ ಪ್ರತಿಪಾದನೆ ಮಾಡಿದರು. ಕುಡಿಯುವುದು ಅಥವಾ ಬಿಡುವುದು ಅದೂ ಕೂಡ ಸರ್ವಾಧಿಕಾರಿ ವೃತ್ತಿಯೇ ಆಗುತ್ತದೆ. ಕುಡಿಯಬೇಕೆಂದು ಬಯಸತಕ್ಕಂಥ ಮನುಷ್ಯ, ಅದನ್ನು ಪ್ರತಿಬಂಧ ಮಾಡಬೇಕೆಂದು

ಹೇಳಿದರೆ, ಯಾವ ರೀತಿ ತಪ್ಪಾಗುತ್ತದೆ? ನಿಮ್ಮ ತಾರ್ಕಿಕ ಲೆಕ್ಕದಲ್ಲಿಯೇ ಇದೂ ಕೂಡ ಜೀವನದ ಭದ್ರತೆ, ಆರೋಗ್ಯ ಮತ್ತು ಅಪಘಾತಗಳು ಇವುಗಳಿಗೆ ಸಂಬಂಧಪಟ್ಟಂತೆ ನಿಯಂತ್ರಣ ಮಾಡಲಿಕ್ಕೆ ಸಮಾಜ ಕೆಲವು ತಮ್ಮ ವೈಯಕ್ತಿಯ ಸ್ವಾತಂತ್ರ್ಯದ ಹಕ್ಕನ್ನು ಸರ್ಕಾರಕ್ಕೆ ಮತ್ತು ಸಮುದಾಯಕ್ಕೆ ಕೊಟ್ಟು ಮತ್ತೆ ಅದು ರಕ್ಷಣೆಯನ್ನು ಪಡೆಯುತ್ತದೆ. ಆ ಕಾರಣಕ್ಕಾಗಿಯೇ ಇದನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಮಾಡಿದ್ದೇವೆ. ಮತ್ತೊಂದು, ನಮ್ಮ ಸಾವು ನಮ್ಮ ಕೈಯಲ್ಲಿದೆ ಎಂಬ ಮಾತನ್ನು ಹೇಳುತ್ತಾರೆ; ಅದಲ್ಲ. ಕಾಂಟ್ರಿಬ್ಯೂಟರಿ ನೆಗ್ಲಿಜನ್ಸ್ ಎನ್ನತಕ್ಕಂಥಾದ್ದು ಕೂಡ ನಮ್ಮ ಕಾನೂನಿನ ಅಡಿಯಲ್ಲಿ ಇದೆ. ನಾನು ಸರಿಯಾದಂಥ ರೀತಿಯಲ್ಲಿ ವಾಹನವನ್ನು ಚಾಲನೆ ಮಾಡಿಕೊಂಡು ಹೋಗುತ್ತಾ ಇದ್ದರೂ ಕೂಡ, ಬೇರೊಬ್ಬನ ಅಜಾಗೃತಿಯಿಂದ ಸಾವು ಆಗುವಂಥ, ಅಪಘಾತ ಆಗುವಂಥ ಸಂಭವಗಳು ಇರುವ ಕಾರಣಕ್ಕಾಗಿಯೇ ಇದು ಅತ್ಯಂತ ಉತ್ತಮವಾಗಿರತಕ್ಕಂಥ ನಿರ್ಧಾರ. ಆ ಕಾರಣಕ್ಕಾಗಿಯೇ ಹೆಲ್ಮೆಟ್ ಧರಿಸುವುದನ್ನು ಕಡ್ಡಾಯಗೊಳಿಸುತ್ತೇವೆ; ಇದು ನಮ್ಮ ಸರ್ಕಾರದ ನಿಲುವು.

ಶ್ರೀ ವಾಟಾಳ್ ನಾಗರಾಜ್ : ಹೆಣ್ಣು ಮಕ್ಕಳು, ಸಣ್ಣ ಮಗು ಕೂಡಿಸಿಕೊಂಡು ಬರುತ್ತಾರೆ, ಅವರು ಹೆಲ್ಮೆಟ್ ಆ ಮಗುವಿಗೆ ಹಾಕುವುದಕ್ಕಾಗುತ್ತದೆಯೇ? ಆದ್ದರಿಂದ, ಈ ಕಡ್ಡಾಯ ಸರಿಯಲ್ಲ. ಹೆಲ್ಮೆಟ್ ಧರಿಸುವುದನ್ನು ಕಡ್ಡಾಯ ಮಾಡುವ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ. ಈ ಕಡ್ಡಾಯ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಹಿಂದುಗಡೆ ಸೀಟಿನಲ್ಲಿ ಕುಳಿತವರಿಗೆ ವಿನಾಯಿತಿ ಕೊಡಬೇಕು. ಏಕೆಂದರೆ, ಅದು ತಪ್ಪಾಗುತ್ತದೆ. ಹಿಂದುಗಡೆ ಸೀಟಿನವರೂ ಹೆಲ್ಮೆಟ್ ಇಟ್ಟುಕೊಂಡು, ಮುಂದುಗಡೆಯವರೂ ಹೆಲ್ಮೆಟ್ ಇಟ್ಟುಕೊಂಡು, ಮಗು ಇದ್ದರೆ, ಆ ಮಗುವಿಗೂ ಹೆಲ್ಮೆಟ್ ಇಟ್ಟುಕೊಂಡು ಹೋಗಬೇಕೆಂಬುದು ಸರಿಯಲ್ಲ. ನಿಮಗೆ ಸ್ವಲ್ಪ ದಯೇ ಇರಲಿ. ಕರುಣೆ ಇರಲಿ.

(ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

(ಅಡಚಣೆ)

ಶ್ರೀ ಕೆ. ಶ್ರೀನಿವಾಸಗೌಡ : ಈ ವಿಧಾನ ಸಭೆಯಲ್ಲಿ ವಾಟಾಳ್ ನಾಗರಾಜರು ಒನ್ ಮ್ಯಾನ್ ಆರ್ಮಿ ಆಗಿಬಿಟ್ಟಿದ್ದಾರೆ. ಅವರಿಗೆ ಯಾರದ್ದೂ ಸೈನ್ಯ ಬೇಕಾಗಿಲ್ಲ. ಅವರೇ ಸೈನ್ಯಾಧಿಪತಿ, ಅವರೇ ಸೈನ್ಯ.

(ಅಡಚಣೆ)

(ಇ) ವಿಷಯ: ಪೊಲೀಸ್ ವೆರಿಫಿಕೇಷನ್ ಶುಲ್ಕ ವಹಿಸಿರುವ ಬಗ್ಗೆ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಸಭಾಧ್ಯಕ್ಷರೇ, ಇವತ್ತು ತಮ್ಮ ಮುಖೇನ ಸರ್ಕಾರಕ್ಕೆ ಮತ್ತೊಮ್ಮೆ ಸದನದಲ್ಲಿ ಮನವಿ ಮಾಡುವುದೇನೆಂದರೆ, ಇವತ್ತು ಬಹಳಷ್ಟು ನಿರುದ್ಯೋಗ ಸಮಸ್ಯೆ ಕೊಡುತ್ತಾ ಇದೆ. ಯಾವುದೇ ನಿರುದ್ಯೋಗಿಗಳು, ಸರ್ಕಾರಿ, ಖಾಸಗಿ ಅಥವಾ ಮಲ್ಟಿನ್ಯಾಷನಲ್ ಕಂಪನಿಗಳಿಗೆ ಅಪ್ಲೈ ಮಾಡಬೇಕಾದರೆ, ಪೋಲಿಸ್ ಕ್ಲಿಯರೆನ್ಸ್ ಬೇಕಾಗುತ್ತದೆ. ಪೊಲೀಸ್ ಇಲಾಖೆಯಲ್ಲಿ ಅಥವಾ ಸಮಾಜದಲ್ಲಿ ಯಾವುದೇ ಅಪರಾಧಗಳು ಇಲ್ಲವೆಂದು ಪೊಲೀಸ್ ವೆರಿಫಿಕೇಷನ್ ಆಗಿ, ಕ್ಲಿಯರೆನ್ಸ್ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟ ಹಾಗೆ ಹಿಂದೆ